ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಕ್ರೀಡಾ ರಾಜ್ಯ ಸಚಿವರು):-

ಅ. ಮಾಸಾಶನವನ್ನು 3771 ಜನರಿಗೆ ನೀಡಲಾಗಿದೆ.

ಆ. 1987-88ನೇ ಸಾಲಿನಿಂದ ಆರ್ಥಿಕ ಮುಗ್ಗಟ್ಟಿನಿಂದ ಹೊಸದಾಗಿ ಮಂಜೂರು ಮಾಡಿರುವುದಿಲ್ಲ.

ಇ. ಸಂತ್ರಸ್ತರ ಬಗ್ಗೆ ಸಹಾನುಭೂತಿಯಿಂದ ಪರಿಶೀಲಿಸಲಾಗುವುದು.

ಸೀಮೆಎಣ್ಣೆ ಕೊರತೆಯ ನಿವಾರಣೆಗೆ ಕ್ರಮ

1264 (2043): ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):-

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಸೀಮೆಎಣ್ಣೆ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಈ ಕೊರತೆಯನ್ನು ಸರಿಪಡಿಸಲು ಸರ್ಕಾರದವರು ಕೈಗೊಳ್ಳುವ ಕ್ರಮವೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ. ಹೌದು.

ಆ. ರಾಜ್ಯದ ಬೇಡಿಕೆಯು ಪ್ರತಿ ತಿಂಗಳಿಗೆ 67,000 ಕೆ. ಎಲ್. ಇದ್ದು ಕೇಂದ್ರ ಸರ್ಕಾರವು ರಾಜ್ಯಕ್ಕೆ ತಿಂಗಳಿಗೆ 47,513 ಕೆ.ಎಲ್. ಮಾತ್ರ ಬಿಡುಗಡೆ ಮಾಡುತ್ತಿರುತ್ತದೆ. ಈ ಬಗ್ಗೆ ರಾಜ್ಯಸರ್ಕಾರವು ಕೇಂದ್ರಸರ್ಕಾರವನ್ನು ಹೆಚ್ಚುವರಿಯಾಗಿ ಸೀಮೆಎಣ್ಣೆ ಪ್ರಮಾಣವನ್ನು ಬಿಡುಗಡೆ ಮಾಡಬೇಕೆಂದು ಸತತವಾಗಿ ವಿನಂತಿಸುತ್ತಿದೆ.

ಲಾಟರಿ ಟಿಕೆಟ್ಟಿನಿಂದ ಬರುವ ಆದಾಯ

1265 (2044): ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):-

ಮಾನ್ಯ ಹಣಕಾಸಿನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಲಾಟರಿ ಯೋಜನೆಯಿಂದ ಸರ್ಕಾರಕ್ಕೆ ಸಂದಾಯವಾಗುವ ಒಟ್ಟು ಮೊಬಲಗೆಷ್ಟು;

ಆ. ಬೇರೆ ರಾಜ್ಯದ ಲಾಟರಿ ಟಿಕೇಟುಗಳಿಂದ ಸರ್ಕಾರಕ್ಕೆ ಏನಾದರೂ ಆದಾಯ ಬರುತ್ತಿದೆಯೆ ?

ಶ್ರೀ ರಾಮಲಿಂಗಾ ರೆಡ್ಡಿ (ಹಣಕಾಸಿನ ರಾಜ್ಯ ಸಚಿವರು):-

ಅ. 1991-92ರ ಸಾಲಿನಲ್ಲಿ ಒಟ್ಟು ರೂ.25.45 ಕೋಟಿ ವಹಿವಾಟು ನಡೆದಿದ್ದು, ಇದರಲ್ಲಿ ರೂ.5.17 ಕೋಟಿ ನಿವ್ವಳ ಆದಾಯ ಬಂದಿರುತ್ತದೆ.

ಆ. ಇಲ್ಲ.

ರಾಜ್ಯದಲ್ಲಿ ನಕಲಿ ಮದ್ಯ ಮಾರಾಟ

1266 (736): ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ):-